# ಶ್ರೀಮಾತೆಯವರ ಪತ್ರಗಳು -೪

ಅನುವಾದ: **ಪ್ರವ್ರಾಜಿಕಾ ಧರ್ಮಪ್ರಾಣಾ**

ಸೋದರಿ ನಿವೇದಿತಾ ಸ್ವಾಮಿ ವಿವೇಕಾನಂದರ ಆದೇಶದಂತೆ ಭಾರತದಲ್ಲಿ ಭಾರತ ಸ್ತ್ರೀಯರಿಗಾಗಿ ಒಂದು ಶಾಲೆಯನ್ನು ಸ್ಥಾಪಿಸಿದಳು. ಅದನ್ನು ನಡೆಸಲು ಬೇಕಾದ ಧನ ಸಂಗ್ರಹಕ್ಕಾಗಿ ಅವಳಿಗೆ ಪಾಶ್ಚಾತ್ಯ ದೇಶಗಳಿಗೆ ಹೋಗಬೇಕಾಯಿತು. ಶ್ರೀಮಾತೆಯವರಲ್ಲಿ ಅವಳಿಗೆ ಅತ್ಯಂತ ಶ್ರದ್ಧೆ, ಭಕ್ತಿ, ಪ್ರೀತಿಯಿದ್ದುದರಿಂದ ಅಲ್ಲಿಂದ ಅವರಿಗೆ ಪತ್ರವನ್ನು ಬರೆದು ತನ್ನ ಎಲ್ಲಾ ವಿಷಯಗಳನ್ನು ತಿಳಿಸುತ್ತಿದ್ದಳು. ಶ್ರೀಮಾತೆಯವರೂ ಅವಳ ಬಗ್ಗೆ ತಿಳಿಯಲು ಕಾತರರಾಗುತ್ತಿದ್ದರು. ಮುಂದಿನದು ಅವಳ ಪತ್ರಕ್ಕೆ ಉತ್ತರವಾಗಿ ಶ್ರೀಮಾತೆಯವರ ಒಂದು ಪತ್ರ:

## ಪತ್ರ ೧೨

ಶ್ರೀ ಗುರುಚರಣದಲ್ಲಿ ಭರವಸೆ

ಜಯರಾಂಬಾಟಿ ೪-೪-೧೯೦೦

ಶುಭಾಶೀರ್ವಾದಗಳೊಂದಿಗೆ ಈ ಪತ್ರ.

ಪ್ರೀತಿಯ ಮಗಳು ನಿವೇದಿತಾ, ನನ್ನ ಆತ್ಮೀಯ ಪ್ರೀತಿಯನ್ನು ಸ್ವೀಕರಿಸು. ನೀನು ನನ್ನ ನಿತ್ಯ ಶಾಂತಿಗಾಗಿ ಭಗವಂತನಲ್ಲಿ ಪ್ರಾರ್ಥಿಸಿರುವೆ ಎಂದು ತಿಳಿದು ಸಂತೋಷವಾಯಿತು. ನೀನು ಆ ಸದಾನಂದಮಯಿ ಮಾತೆಯ ಪ್ರತಿಮೂರ್ತಿ. ನನ್ನ ಬಳಿ ಇರುವ ನಿನ್ನ ಭಾವಚಿತ್ರವನ್ನು ನಾನು ಆಗಾಗ ನೋಡುತ್ತಾ ಇರುತ್ತೇನೆ. ಆಗೆಲ್ಲಾ ನೀನು ನಮ್ಮ ನಡುವೆಯೇ ಇರುವಂತೆ ಅನ್ನಿಸುತ್ತದೆ. ನೀನು ಯಾವ ವರ್ಷ, ಯಾವ ದಿನದಂದು ಬರುವೆ ಎಂದು ಆ ದಿನಕ್ಕಾಗಿ ಹಂಬಲಿಸಿ ಕಾಯುತ್ತಿರುವೆ. ಶುದ್ಧ ಪವಿತ್ರ ಜೀವನದಿಂದ ಕೂಡಿದ ನಿನ್ನ ಹೃದಯದಿಂದ ನನಗಾಗಿ ಮಾಡಿದ ಪ್ರಾರ್ಥನೆ ಸಫಲವಾಗಲಿ. ನಾನು ಕ್ಷೇಮದಿಂದ ಆನಂದವಾಗಿಯೇ ಇದ್ದೇನೆ. ಭಗವಂತನು ನಿನ್ನ ಕೆಲಸಕ್ಕೆ ಸಹಾಯಮಾಡಿ, ನಿನಗೆ ಶಕ್ತಿಯನ್ನೂ, ಆನಂದವನ್ನೂ ನೀಡಲಿ ಎಂದು ಸದಾ ನನ್ನ ಪ್ರಾರ್ಥನೆ. ನೀನು ಆದಷ್ಟು ಬೇಗ ಮರಳಿ ಬರುವಂತಾಗಲಿ ಎಂದು ಪ್ರಾರ್ಥಿಸುತ್ತಿದ್ದೇನೆ. ಭಾರತದಲ್ಲಿ ಸ್ತ್ರೀಯರಿಗಾಗಿ ಆಶ್ರಮ ಮಾಡಬೇಕೆಂಬ ನಿನ್ನ ಇಚ್ಛೆಯನ್ನು ಭಗವಂತನು ಪೂರೈಸಲಿ. ಮುಂದೆ ಆ ಆಶ್ರಮವು ಎಲ್ಲರಿಗೂ ಸರಿಯಾದ ಧರ್ಮದ ಶಿಕ್ಷಣವನ್ನು ನೀಡಿ, ಅದರ ಉದ್ದೇಶ ಸಫಲವಾಗಲಿ.

ಈ ಬ್ರಹ್ಮಾಂಡದ ಪ್ರಾಣ ಸ್ವರೂಪನಾದ ಭಗವಂತನು ತನ್ನ ಸ್ತೋತ್ರವನ್ನು ತಾನೇ ಸ್ತುತಿಸುತ್ತಿದ್ದಾನೆ. ನೀನು ಈ ನಶ್ವರ ಜಗತ್ತಿನ ಮೂಲಕವೇ ಆ ನಿತ್ಯ ಸಂಗೀತವನ್ನು ಶ್ರವಣ ಮಾಡುತ್ತಿರುವೆ. ವೃಕ್ಷಗಳೂ, ಲತೆಗಳೂ ಪಶುಪಕ್ಷಿಗಳೂ, ಪರ್ವತಗಳೂ, ಎಲ್ಲರೂ



ಆ ಭಗವಂತನನ್ನು ಸ್ತುತಿಸುತ್ತಿವೆ. ದಕ್ಷಿಣೇಶ್ವರದ ವಟವೃಕ್ಷಗಳೂ ಖಂಡಿತ ಕಾಳಿಮಾತೆಯನ್ನೇ ಸ್ತುತಿಸುತ್ತಿವೆ. ಯಾರಿಗೆ ಕೇಳುವ ಕಿವಿಯಿದೆಯೋ ಅವರಷ್ಟೇ ಅದನ್ನು ಕೇಳಬಲ್ಲರು.

Mrs. Watermanಳ ದೃಢ ವಿಶ್ವಾಸದ ಬಗ್ಗೆ ಕೇಳಿ ತುಂಬಾ ಸಂತೋಷವಾಯಿತು. ಯಾರಿಗೆ ತಮ್ಮ ಪ್ರೀತಿಯ ವ್ಯಕ್ತಿ ಮರಣ ಹೊಂದಿದರೂ ಅವರನ್ನು ಕಳೆದುಕೊಂಡಿಲ್ಲ ಎಂದೆನ್ನಿಸುವುದೋ ಅವರು ನಿಜವಾಗಿಯೂ ದಿವ್ಯತೆಯನ್ನು ಹೊಂದಿದ್ದಾರೆ. ಏಕೆಂದರೆ ದೇಹ ಮರಣ ಹೊಂದಿದರೂ ಆತ್ಮವು ನಾಶವಾಗುವುದಿಲ್ಲ. ನನ್ನ ಬಗ್ಗೆ ಕೇಳಿ ಅವಳು ಬಲವನ್ನು ಪಡೆದಿದ್ದಾಳೆಂದು ಕೇಳಲು ಇಚ್ಛಿಸುತ್ತೇನೆ. ಅವಳು ನಿನ್ನ ಕೆಲಸಕ್ಕೆ ಸಹಾಯಕಳಾಗಿರಲಿ. Mrs. May Wright Sewell ಳಿಗೆ ನನ್ನ ಪ್ರೀತಿ, ಆಶೀರ್ವಾದಗಳನ್ನು ತಿಳಿಸು.

ನಿನಗೆ ನನ್ನ ಪ್ರೀತಿ ಮತ್ತು ಆಶೀರ್ವಾದಗಳು. ಮತ್ತು ನಿನ್ನ ಆಧ್ಯಾತ್ಮಿಕ ಜೀವನದಲ್ಲಿ ಉನ್ನತಿಯನ್ನು ಹೊಂದು ಎಂಬುದೇ ನನ್ನ ಪ್ರಾರ್ಥನೆ. ನಿಜವಾಗಿಯೂ ನೀನು ಉತ್ತಮ ಕಾರ್ಯವನ್ನೇ ಮಾಡುತ್ತಿರುವೆ. ಆದರೆ ಬಂಗಾಳಿ ಭಾಷೆಯನ್ನು ಮರೆಯಬೇಡ. ಏಕೆಂದರೆ, ನೀನು ಮರಳಿ ಬಂದಾಗ ನಿನ್ನ ಮಾತುಗಳನ್ನು ನನಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಧ್ರುವ, ಸಾವಿತ್ರಿ, ಸೀತೆ, ರಾಮ ಮೊದಲಾದವರ ಬಗ್ಗೆ ನೀನು ಅಲ್ಲಿ ಭಾಷಣ ಮಾಡುತ್ತಿರುವೆ ಎಂಬುದನ್ನು ಕೇಳಿ ನನಗೆ ತುಂಬಾ ಸಂತೋಷವಾಯಿತು. ಅವರ ಪವಿತ್ರ ಜೀವನದ ಕಥೆ ಸಾಂಸಾರಿಕ ಮಾತುಕತೆ

ಗಳಿಗಿಂತ ಅತ್ಯಂತ ಶ್ರೇಷ್ಠ — ಇದು ಖಂಡಿತ. ಭಗವಂತನ ನಾಮ ಮತ್ತು ಲೀಲೆ ಎಷ್ಟು ಮನೋಹರವಾದದ್ದು!

ನಿನ್ನ ತಾಯಿ

ಶ್ರೀ ರಾಮಕೃಷ್ಣರ ನೇರ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ರಾಮ ಕೃಷ್ಣಾನಂದರಿಗೆ ಶ್ರೀಮಾತೆಯವರು ಬರೆದ ಪತ್ರಗಳು.

ಸ್ವಾಮಿ ವಿವೇಕಾನಂದರ ಆದೇಶದಂತೆ ಸ್ವಾಮಿ ರಾಮಕೃಷ್ಣಾ ನಂದರು ಮದ್ರಾಸಿನಲ್ಲಿ ಶ್ರೀರಾಮಕೃಷ್ಣ ಮಠವನ್ನು ಸ್ಥಾಪಿಸಿ ಶ್ರೀರಾಮಕೃಷ್ಣರ ಭಾವಪ್ರಚಾರ ಕಾರ್ಯವನ್ನು ಕೈಗೊಂಡರು. ಶ್ರೀಮಾತೆಯವರಲ್ಲಿ ಅತ್ಯಂತ ಶ್ರದ್ಧೆ, ಭಕ್ತಿಗಳನ್ನು ಹೊಂದಿದ್ದ ಅವರು ಅವರಿಗೆ ಆಗಾಗ ಅಲ್ಲಿಯ ಕೆಲಸ, ಕಾರ್ಯಗಳ ಬಗ್ಗೆ ತಿಳಿಸಿ ಪತ್ರ ಬರೆದು ಅವರಿಂದ ಸಲಹೆ, ನಿರ್ದೇಶನಗಳನ್ನು ಪಡೆಯುತ್ತಿದ್ದರು. ಶ್ರೀಮಾತೆಯವರೂ ಅವರಿಗೆ ಪತ್ರ ಬರೆದು ಅವರ ಕ್ಷೇಮ ಸಮಾಚಾರಗಳನ್ನು ತಿಳಿದುಕೊಳ್ಳುತ್ತಿದ್ದರು. ಅವು ಗಳಲ್ಲಿ ಕೆಲವು ಈ ಪತ್ರಗಳು:

### ಪತ್ರ -೧೩

ಓಂ ಶ್ರೀರಾಮಕೃಷ್ಣ ಜಯತಿ

ಪರಮ ಶುಭಾಶೀರ್ವಾದಗಳನ್ನು ತಿಳಿಸುತ್ತಾ ,

ವಿಶೇಷವೇನೆಂದರೆ,

ನಿನ್ನ ಪತ್ರ ಇಂದು ಸಿಕ್ಕಿತು. ಮನೆಯ ಯಜಮಾನ ತೀರಿ ಕೊಂಡನೆಂದು ತಿಳಿದು ದುಃಖವಾಯಿತು. ಅದಕ್ಕಾಗಿ ದುಃಖಿಸು ವುದು ವ್ಯರ್ಥ. ಆಳವಾಗಿ ಚಿಂತಿಸಿ ನೋಡಿದರೆ ಎಲ್ಲರದೂ ಒಂದೇ ಹಾದಿ. ಅದಕ್ಕೋಸ್ಕರ ಚಿಂತಿಸುವುದು ವ್ಯರ್ಥ. ಭಗ ವಂತನ ಕೃಪೆಯಿಂದ ಅವನು ಸದ್ಗತಿಯನ್ನು ಹೊಂದಲಿ. ಅದ ಕ್ಕಾಗಿ ನಾನು ಭಗವಂತನನ್ನು ಪ್ರಾರ್ಥಿಸುತ್ತೇನೆ. ಬಟ್ಟೆಯನ್ನು ಕಳುಹಿಸಿರುವೆ ಎಂದು ಬರೆದಿರುವೆ. ಮತ್ತು ಶ್ರೀರಾಮಕೃಷ್ಣರ (ಜಯಂತಿಯ) ಉತ್ಸವದ ಬಗ್ಗೆ ಬರೆದಿರುವೆ. ತಮ್ಮ ಕಾರ್ಯ ವನ್ನು ಅವರೇ ಮಾಡಿಸಿಕೊಳ್ಳುವರು. ವಸಂತ ಎಂಬ ಹೆಸರಿನ ಹುಡುಗ ಮತ್ತು ಇನ್ನೊಬ್ಬ ಹುಡುಗನೂ ಬಂದಿರುವನೆಂದು ಕೇಳಿ ಸಂತೋಷವಾಯಿತು. ಭಗವಂತನ ಕೃಪೆಯಿಂದ ಅವರಿಗೆ ಧರ್ಮಲಾಭವಾಗಲಿ ಎಂಬುದೇ ನನ್ನ ಇಚ್ಛೆ. ನಾವೆಲ್ಲಾ ಚೆನ್ನಾ ಗಿರುವೆವು. ನಿಮ್ಮೆಲ್ಲರ ಕುಶಲದ ಬಗ್ಗೆ ಆಗಾಗ ಎರಡು ವಾಕ್ಯ ಬರೆಯುತ್ತಿರು.

ಇತಿ ಸ್ಮರಣೆಯೊಂದಿಗೆ,

***ಪತ್ರ ಪಡೆದವರ ಹೆಸರು ಮತ್ತು ವಿಳಾಸ:***

*Swami Ramakrishnananda*
*Castle Kernan, 9 Maclean*
*Triplicane, Madras.*

### ಪತ್ರ ೧೪

ಶ್ರೀ ಶ್ರೀ ಗುರುದೇವರ ಕೃಪೆ

ಜಯರಾಂಬಾಟಿ
೧೭-೯-೧೯೦೨

ಸುರಕ್ಷಿತವಾಗಿರು.
ಪರಮ ಶುಭ ಆಶೀರ್ವಾದಗಳು.

ನಿನ್ನ ಒಂದು ಪತ್ರ ಸಿಕ್ಕಿ ಎಲ್ಲಾ ಸಮಾಚಾರಗಳನ್ನು ತಿಳಿದು ಕೊಂಡೆ. ನಾವೆಲ್ಲಾ ತುಂಬಾ ಚೆನ್ನಾಗಿದ್ದೇವೆ. ನಿಮ್ಮೆಲ್ಲರ ಕ್ಷೇಮದ ಬಗ್ಗೆ ಎರಡು ವಾಕ್ಯ ಬರೆ. ಶ್ರೀ ರಾಮಕೃಷ್ಣರ ಇಚ್ಛೆ ಮತ್ತು ನನ್ನ ಪ್ರಾರ್ಥನೆಯಂತೆ ಆದಷ್ಟು ಬೇಗ ಮಠವು ತಯಾರಾಗಲಿ. ಸ್ವಾಮೀಜಿಗಾಗಿ ಇನ್ನು ಯಾವುದೇ ಚಿಂತೆ ಮಾಡಬೇಡ. ದೀನು ಬಾಬು, ವಸಂತ, ಬ್ರಹ್ಮಚಾರಿ, ನೀನು ಎಲ್ಲರಿಗೂ ನನ್ನ ಆಶೀ ರ್ವಾದಗಳು. ನಿಮ್ಮೆಲ್ಲರ ಕ್ಷೇಮದ ಬಗ್ಗೆ ಎರಡು ಮಾತು ಬರೆ.

ಇತಿ,

ನಿಮ್ಮೆಲ್ಲರ ತಾಯಿಯ ಆಶೀರ್ವಾದದ ಪತ್ರ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ:***

*Swami Ramakrishnanandaji*
*Castle Kernan, 9 Maclean*
*Triplicane, Madras.*

### ಪತ್ರ ೧೫

ಶ್ರೀ ಶ್ರೀ ಗುರುದೇವರ ಕೃಪೆ ೯-೧೦-೧೯೦೨

ದೀರ್ಘಾಯುವಾಗು.

ಪರಮ ಶುಭಾಶೀರ್ವಾದ ನೀಡುತ್ತಾ ವಿಶೇಷವೇನೆಂದರೆ,

ಮಗು, ನೀನು ಅಂಚೆಯ ಮೂಲಕ ಕಳುಹಿಸಿರುವ ಬಟ್ಟೆ (ಸೀರೆ) ಮತ್ತು ಪತ್ರ ಸಿಕ್ಕಿತು. ಬಟ್ಟೆಯನ್ನು ನೋಡಿ ಅತ್ಯಂತ ಸಂತೋಷ ವಾಯಿತು. ಈಗ ನಾನು ಚೆನ್ನಾಗಿದ್ದೇನೆ.ಯಾವ ಕಾಯಿಲೆಯೂ ಇಲ್ಲ. ಸಾರದಾ (ಸ್ವಾಮಿ ತ್ರಿಗುಣಾತೀತಾನಂದ) ಭಗವಂತನ ಕೃಪೆಯಿಂದ ಮತ್ತು ಶ್ರೀರಾಮಕೃಷ್ಣರ ಆಶೀರ್ವಾದ ದಿಂದ ವಿಜಯಿಯಾಗಲಿ ಮತ್ತು ಯಾವ ವಿಘ್ನವೂ ಉಂಟಾಗ ದಿರಲಿ ಎಂದು ನಾನು ಆಶೀರ್ವಾದ ಮಾಡುತ್ತಿರುವೆ. ನಿನಗೂ ಮತ್ತು ದೀನಬಂಧು ಮೊದಲಾದವರಿಗೂ ನನ್ನ ಆಶೀರ್ವಾದ. ಇಲ್ಲಿ ಎಲ್ಲವೂ ಕ್ಷೇಮ. ನಿಮ್ಮೆಲ್ಲರ ಕ್ಷೇಮದ ಬಗ್ಗೆ ಬರೆಯುತ್ತಿರು. ಇತಿ,

ಆಶ್ವಯುಜ ೨೩ನೇ ದಿನ, ಆಶೀರ್ವಾದ ಪತ್ರ

ನಿಮ್ಮೆಲ್ಲರ ತಾಯಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ:***

*Swami Ramakrishnanandaji*
*The Math, P.O. Belur*
*Dt. Howrah, Bengal*